# ಮಹಾಪುರುಷರೊಂದಿಗೆ ನನ್ನ ಒಡನಾಟ

**ಸ್ವಾಮಿ ಸೌಮ್ಯಾನಂದ**

*ಅನುವಾದ : ಉಮಾ ಮೂರ್ತಿ*



**ಉ**ದ್ಬೋಧನದಲ್ಲಿ ಶ್ರೀಮಾತೆಯವರು ತೀವ್ರ ಖಾಯಿಲೆಗೆ ಒಳಗಾಗಿದ್ದರು. ಪೂಜ್ಯ ಮಾತೆಯವರ ಸಹಾಯಕರೂ, ನನ್ನ ಸಹಪಾಠಿಯೂ ಆಗಿದ್ದ ಸಾಧುವೊಬ್ಬರು ನನಗೆ ಬೇಲೂರು ಮಠಕ್ಕೆ ಬಂದು, ಅನಂತರ ಉದ್ಬೋಧನಕ್ಕೆ ಶ್ರೀಮಾತೆಯವರ ದರ್ಶನವನ್ನು ಪಡೆಯಲು ಹೋಗೋಣವೆಂದು ಕಾಗದ ಬರೆದರು.

ಪೂಜ್ಯ ಮಹಾಪುರುಷ ಮಹಾರಾಜರು (ಸ್ವಾಮಿ ಶಿವಾನಂದಜಿ) ಆಗ ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಾಗಿದ್ದರು; ಬೇಲೂರು ಮಠದಲ್ಲಿದ್ದರು. ಮೊದಲು ನಾನು ನನ್ನ ಹಾಸಿಗೆ ಮೊದಲಾದ ಸಾಮಾನುಗಳನ್ನು ಅತಿಥಿಗೃಹದ ಒಂದು ಮೂಲೆಯಲ್ಲಿಟ್ಟೆ. ಅನಂತರ ಪವಿತ್ರ ಗಂಗಾನದಿಯನ್ನು ದರ್ಶಿಸಿ, ನೀರನ್ನು ನನ್ನ ತಲೆ ಮೇಲೆ ಪ್ರೋಕ್ಷಿಸಿಕೊಂಡು ಸ್ವಲ್ಪ ನೀರನ್ನು ಕುಡಿದೆ. ಮಹಡಿಯಲ್ಲಿದ್ದ ಶ್ರೀರಾಮಕೃಷ್ಣರ ಸನ್ನಿಧಿಗೆ ಹೋಗಿ ನಮಸ್ಕರಿಸಿದೆ. ಆಮೇಲೆ ನಾನು ಮತ್ತು ನನ್ನ ಜೊತೆಯಲ್ಲಿ ಬಂದಿದ್ದ ಸಾಧು ಇಬ್ಬರೂ

> ರಾಮಕೃಷ್ಣ ಮಹಾಸಂಘದ ಹಿರಿಯ ಸಂನ್ಯಾಸಿಗಳೊಬ್ಬರು ಬರೆದಿರುವ ಸ್ವಾಮಿ ಶಿವಾನಂದಜಿ ಅವರ ನೆನಪುಗಳನ್ನು ಅನುವಾದಿಸಿರುವ ಲೇಖಕಿ ಬೆಂಗಳೂರಿನ ನಿವಾಸಿಗಳು.

ಪೂಜ್ಯ ಮಹಾಪುರುಷ ಮಹಾರಾಜರನ್ನು ಕಂಡು ಅವರಿಗೆ ನಮಸ್ಕರಿಸಿದೆವು. ಕೆಲವು ದಿನ ಮಠದಲ್ಲಿರಲು ನಾನು ಅವರನ್ನು ಪ್ರಾರ್ಥಿಸಿದಾಗ ಅವರು ಸಂತೋಷದಿಂದ ಅನುಮತಿ ಇತ್ತರು. ಆ ದಿನ ಸಂಜೆಯ ಆರತಿಯ ನಂತರ ನಾನು ಅತಿಥಿಗೃಹಕ್ಕೆ ಹಿಂತಿರುಗಿ, ಬೇಲೂರು ಮಠದ ಆಧ್ಯಾತ್ಮಿಕ ವಾತಾವರಣವನ್ನು ಸಂತೋಷದಿಂದ ಅನುಭವಿಸುತ್ತಿದ್ದಾಗ, ಮಠದ ಇಬ್ಬರು ಸಾಧುಗಳು ಒಳಗೆ ಬಂದರು. ಆ ಕೋಣೆಯ ಮೂಲೆಯೊಂದರಲ್ಲಿ ತಂಬೂರಿ, ಮೃದಂಗ, ತಬಲ, ಹಾರ್ಮೋನಿಯಂ ಮುಂತಾದ ಸಂಗೀತ ವಾದ್ಯಗಳಿದ್ದವು. ಅವನ್ನು ನೋಡಿ ನಾನು ಆ ಸಾಧುಗಳಿಗೆ, "ಅಲ್ಲಿ ಕುಳಿತು ಕೆಲವು ಭಕ್ತಿಗೀತೆಗಳನ್ನು ಹಾಡಲೇ?" ಎಂದಾಗ ಅವರು ಸಮ್ಮತಿಸಿದರು. ಅನಂತರ ನಾನು ಹಾರ್ಮೋನಿಯಂ ಅನ್ನು ಜಾಗರೂಕತೆಯಿಂದ ಹೊರತೆಗೆದು ಇಂದ್ರದಯಾಲ ಬಾಬು (ಮುಂದೆ ಸ್ವಾಮಿ ಪ್ರೇಮೇಶಾನಂದ) ಅವರು ಹೊಸದಾಗಿ ರಚಿಸಿದ್ದ **ಅರೂಪ ಸಾಯರೇ ಲೀಲಾಲಹರಿ** – "ದಿವ್ಯಲೀಲೆಯ ಅಲೆಗಳು ನಿರಾಕಾರ ಸಮುದ್ರದ ಮೇಲೆ ಏಳುತ್ತಿವೆ" ಎಂಬ ಗೀತೆಯೊಂದನ್ನು ಹಾಡಿದೆ.

ಆ ಪರಮ ಪವಿತ್ರ ವಾತಾವರಣದಲ್ಲಿ ಸಂಪೂರ್ಣ ಲೀನನಾದ ನಾನು ವಾದ್ಯಗಳ ಸಹಾಯವಿಲ್ಲದೆಯೇ ಹಾಡಲಾರಂಭಿಸಿದೆ. ಆ ಗಾಯನ ಕೋಣೆಯ ಗೋಡೆಗಳನ್ನು ಭೇದಿಸಿ ಮೇಲಿನ ಮಹಡಿಯಲ್ಲಿದ್ದ ಮಹಾಪುರುಷ ಮಹಾರಾಜರ ಕಿವಿಗೂ ತಲುಪಿತು. ಹಾಡನ್ನು ಕೇಳಿ ಆನಂದಭರಿತರಾದ ಅವರು, "ಯಾರು ಈ ಹಾಡು ಹಾಡುತ್ತಿರುವವರು? ಆಹಾ! ಠಾಕೂರರ ಬಗ್ಗೆ ಎಂಥ ಅದ್ಭುತವಾದ ಗೀತೆ. ಅವರ ದರ್ಶನ ಪಡೆಯದ ಯಾರೂ ಇಂಥ ಗೀತೆಯನ್ನು ರಚಿಸಲು ಸಾಧ್ಯವಿಲ್ಲ" ಎಂದು ತಮಗೆ ನಮಸ್ಕರಿಸಲು ಬಂದ ಸಾಧುಗಳಿಗೆ ಹೇಳಿದರು. ಹೀಗೆ ಹೇಳುವಾಗ, ಅವರು ಆ ಗೀತೆಯ ಭಾವನೆಗಳನ್ನೇ ಉಚ್ಚರಿಸುತ್ತಿರುವಂತೆ ಭಾಸವಾಗುತ್ತಿತ್ತು. ಅವರು ತಮ್ಮ ಊಟವನ್ನು, ಇತರ ಸಾಧುಗಳೊಂದಿಗೆ ಕೆಳಗಿನ ತರಕಾರಿ ಹೆಚ್ಚುವ ಕೋಣೆಯಲ್ಲಿ, ಮಾಡುತ್ತಿದ್ದರು. ಅಂದು ಅವರು ಊಟಕ್ಕೆ ಕೆಳಗಿಳಿದು ಬರುವಾಗ, 'ಅರೂಪ ಸಾಯರೇ....' ಹಾಡನ್ನು ತಮ್ಮಷ್ಟಕ್ಕೆ ಹೇಳಿಕೊಳ್ಳುತ್ತಿದ್ದರು. ಈ ಗೀತೆಯ ಬಗ್ಗೆ ಮಹಾಪುರುಷ ಮಹಾರಾಜರ ಮೆಚ್ಚುಗೆಯನ್ನು ಆ ಸಂಜೆ ಕೇಳಿ, ಎಲ್ಲ ಸಾಧುಗಳೂ ಉಲ್ಲಸಿತರಾದರು. ಮಾರನೆಯ ದಿನ ಬೆಳಗ್ಗೆ ನಾನು ಪ್ರಣಾಮ ಮಾಡಲು ಅವರೆಡೆಗೆ ಹೋದಾಗ, "ನಿನ್ನೆ ಸಾಯಂಕಾಲ ಹಾಡುಗಳನ್ನು ಹಾಡುತ್ತಿದ್ದವನು ನೀನೇ ಏನು?" ಎಂದು ವಿಚಾರಿಸಿದರು.

ನಂತರ ಹೆಚ್ಚು ಕಡಿಮೆ ಪ್ರತಿದಿನವೂ ಸಾಯಂಕಾಲದ ಆರತಿಯ

ನಂತರ ನಾನು ಅತಿಥಿಗೃಹದಲ್ಲಿ ಕುಳಿತು, ಶ್ರೀರಾಮಕೃಷ್ಣರ, ಸ್ವಾಮಿ ವಿವೇಕಾನಂದರ ಅಥವಾ ಕಾಳೀಮಾತೆಯ ಕುರಿತಾದ ಭಕ್ತಿಗೀತೆಗಳನ್ನು ಹಾಡುತ್ತಿದ್ದೆ. ಪೂಜ್ಯರಾದ ಸ್ವಾಮಿ ಶುದ್ಧಾನಂದಜಿ ಮತ್ತು ಸ್ವಾಮಿ ಆತ್ಮಾನಂದಜಿ ಅವರಂಥ ಹಿರಿಯ ಸಾಧುಗಳು ವರಾಂಡದಲ್ಲಿದ್ದ ಉದ್ದನೆಯ ಬೆಂಚೊಂದರಲ್ಲಿ ಗಂಗಾನದಿಗೆ ಅಭಿಮುಖವಾಗಿ ಕುಳಿತು ಹಾಡು ಕೇಳುತ್ತಿದ್ದುದು ಇಂದಿಗೂ ನನ್ನ ಸ್ಮರಣೆಯಲ್ಲಿದೆ. ಇಂದಿಗೂ ನನ್ನ ನೆನಪಿನಲ್ಲಿರುವ ಅಂದಿನ ಹೃದಯಸ್ಪರ್ಶಿಯೂ, ಅಮಿತವೂ, ಶುದ್ಧವೂ ಮತ್ತು ಸಂತೋಷ ಕರವೂ ಆದ ಆ ವಾತಾವರಣ ಮಾತುಗಳಿಗೆ ನಿಲುಕುವಂಥದಲ್ಲ.

ಪೂಜ್ಯ ಮಹಾಪುರುಷ ಮಹಾರಾಜರು ಭಕ್ತಿಸಂಗೀತದಲ್ಲಿ ವಿಶೇಷ ಆಸ್ಥೆಯುಳ್ಳವರಾಗಿದ್ದರು. ಅವರು ನನ್ನ ಬಗ್ಗೆ, ನನ್ನ ವಿದ್ಯಾಭ್ಯಾಸದ ಬಗ್ಗೆ, ನನ್ನ ಕುಟುಂಬದ ಜನರೆಲ್ಲರ ಬಗ್ಗೆ ಮತ್ತು ನಾನು ಶ್ರೀರಾಮಕೃಷ್ಣರ ಬೋಧನೆಗಳಿಗೆ ಪರಿಚಿತನಾದ ವಿಧಾನದ ಬಗ್ಗೆ ಎಲ್ಲ ವಿವರಗಳನ್ನು ಕೇಳಿ ತಿಳಿದುಕೊಂಡರು.

ಮಠದ ಅಂಗಳವನ್ನು ಗುಡಿಸುವುದು, ತರಕಾರಿಗಳನ್ನು ಹೆಚ್ಚು ವುದು, ತೋಟದ ಗಿಡಗಳಿಗೆ ನೀರೆರೆಯುವುದು, ಹಸುಗಳಿಗೆ ಹುಲ್ಲು ಕತ್ತರಿಸಿ ಹಾಕುವುದು – ಇವೇ ಮುಂತಾದ ಕೆಲಸಗಳನ್ನು ಮಾಡುತ್ತಾ, ಸಾಯಂಕಾಲ ಭಕ್ತಿಗೀತೆಗಳನ್ನು ಹಾಡುತ್ತಾ ನಾನು ಮಠದಲ್ಲಿ ಬಹಳ ಆನಂದದಿಂದ ಇದ್ದೆ. ಒಂದು ದಿನ ಪೂಜ್ಯ ಮಹಾಪುರುಷ ಮಹಾರಾಜರು, " ನನಗೋಸ್ಕರ ಒಂದು ಕೆಲಸವನ್ನು ಮಾಡುತ್ತೀಯಾ?" ಎಂದು ಕೇಳಿದರು. ನಾನು ಅವರ ಆಜ್ಞೆಗೆ ಕಾದುಕೊಂಡಿದ್ದೆ. "ಕುಟಿಘಾಟ್ ಎಂಬ ಸ್ಥಳದಲ್ಲಿ ಒಬ್ಬ ವಯಸ್ಸಾದ ಹೆಂಗಸಿದ್ದಾಳೆ. ಆಕೆ ಹರಮೋಹನ ಬಾಬುವಿನ ತಾಯಿ. ಈ ಹಣ್ಣಿನ ಬುಟ್ಟಿಯನ್ನು (ಅದರಲ್ಲಿ ಮಾವು, ಅನಾನಸು, ಮುಂತಾದವುಗಳಿದ್ದವು) ಅವಳಿಗೆ ಕೊಟ್ಟು ಬೇಲೂರು ಮಠದಿಂದ ನಾನು ಇದನ್ನು ಕಳುಹಿಸಿದೆನೆಂದು ಹೇಳು" ಎಂದರು. " ಆಗಲಿ ಪೂಜ್ಯರೇ" ಎಂದ ನಾನು ಹಣ್ಣಿನ ಬುಟ್ಟಿಯನ್ನು ತಲೆಯ ಮೇಲಿರಿಸಿಕೊಂಡು, ಒಂದು ದೋಣಿಯಲ್ಲಿ ಪ್ರಯಾಣ ಮಾಡಿ ಕುಟಿಘಾಟ್‌ನಲ್ಲಿ ಇಳಿದೆ. ಅಪರಿಚಿತ ಸ್ಥಳದಲ್ಲಿ ಬಹಳ ಕಾಲ ಹುಡುಕಿದ ಮೇಲೆ ವಯಸ್ಸಾದ ಆ ಹೆಂಗಸಿನ ಮನೆಯನ್ನು ತಲುಪಿದೆ. ನಾನು ಕೊಟ್ಟ ಹಣ್ಣಿನ ಬುಟ್ಟಿಯನ್ನು ಪಡೆದ ಆಕೆ, ಪೂಜ್ಯ ಮಹಾಪುರುಷ ಮಹಾರಾಜರ ಅಸೀಮ ಅನುಗ್ರಹದ ಬಗ್ಗೆ ಮಾತನಾಡಲು ಪ್ರಾರಂಭಿಸಿದಳು. ಆಗ ಅವಳ ಕಣ್ಣುಗಳಲ್ಲಿ ಕಂಬನಿಯ ಕಾಲುವೆಯೇ ಹರಿಯಿತು. ಮಹಾಪುರುಷ ಮಹಾರಾಜರು ತನಗೆ ಕಾಶಿಯಲ್ಲಿ ವಸತಿ ಮತ್ತು ಆಹಾರದ ವ್ಯವಸ್ಥೆ ಮಾಡಿದ್ದನ್ನು ವಿವರಿಸಿ, ಆದರೆ ತನಗೆ ಕಾಶಿಗೆ ಹೋಗಲು ಸಾಧ್ಯವಾಗಲಿಲ್ಲವೆಂದು ಹೇಳಿ ಮತ್ತೊಮ್ಮೆ ಅತ್ತಳು. ಆಕೆಯನ್ನು ಸ್ವಲ್ಪಮಟ್ಟಿಗೆ ಸಮಾಧಾನ ಮಾಡಿ, ನಾನು ಮಠಕ್ಕೆ ವಾಪಸ್ಸು ಬಂದು, ಎಲ್ಲವನ್ನೂ ಮಹಾಪುರುಷ ಮಹಾರಾಜರಿಗೆ ಹೇಳಿದೆ. ಆಗ ಅವರು, "ಆ ವಯಸ್ಸಾದ ಮಹಿಳೆ ಮಹಾಭಕ್ತಳು, ಠಾಕೂರರ ಭಕ್ತಳು" ಎಂದರು.

ಈ ವೇಳೆ ನಾನು ಹೆಚ್ಚಿನ ಸಮಯ ಬೇಲೂರು ಮಠದಲ್ಲಿ ಇರಲಿಲ್ಲ. ಬರಪರಿಹಾರ ಕಾರ್ಯಕ್ಕೆ ಬರುವಂತೆ ವಿನಂತಿಸಿದ ಒಂದು ಕಾಗದ ನನಗೆ ಬಂತು. ವಿಷಯವನ್ನು ಮಹಾಪುರುಷ ಮಹಾ ರಾಜರಿಗೆ ವಿವರವಾಗಿ ಹೇಳಿದ ನಂತರ ಮಠದಿಂದ ಹೊರಡಲು ಅವರು ಅನುಮತಿ ಇತ್ತರು. "ಇಲ್ಲಿನ ಆಸ್ಪತ್ರೆಯಲ್ಲಿ (ಮಠದ ಕೆಳ ಅಂತಸ್ತಿನಲ್ಲಿದ್ದ ಪ್ರೇಮಾನಂದ ಸ್ಮಾರಕ ಆಸ್ಪತ್ರೆ) ನಿನಗೆ ಕೆಲಸ ಕೊಡುವ ಆಲೋಚನೆ ನನಗಿತ್ತು" ಎಂದು ಅವರು ಹೇಳಿದರು.

೧೯೨೨ ರಲ್ಲಿ ಮಾನ್ಯ ರಾಜಾ ಮಹಾರಾಜ್ (ಸ್ವಾಮಿ ಬ್ರಹ್ಮಾನಂದಜಿ) ಸ್ವಾಮಿ ವಿವೇಕಾನಂದರ ಹುಟ್ಟುಹಬ್ಬದ ಆಚರಣೆಗೆ ಕೆಲವು ದಿನ ಮೊದಲು ಬೇಲೂರು ಮಠಕ್ಕೆ ಬಂದರು. ಅಮೆರಿಕಾದಿಂದ ಹಿಂದಿರುಗಿ ಬಂದಿದ್ದ ಸ್ವಾಮಿ ಅಭೇದಾನಂದರೂ ಆ ಸಮಯದಲ್ಲಿ ಬೇಲೂರು ಮಠದಲ್ಲಿದ್ದರು. ಇಂದ್ರದಯಾಳ ಬಾಬು ಅವರು, ಶರತ್ ಮಹಾರಾಜರಿಗೆ (ಸ್ವಾಮಿ ಶಾರದಾನಂದಜಿ), ರಾಜಾ ಮಹಾರಾಜರಿಗೆ ಮತ್ತು ಮಹಾಪುರುಷ್ ಮಹಾರಾಜರಿಗೆ ಕೊಡಲು ಪತ್ರಗಳನ್ನು ನನಗೆ ಕೊಟ್ಟಿದ್ದರು.

ಉದ್ಬೋಧನದಲ್ಲಿ, ತಮ್ಮ ಕಾಗದವನ್ನು ಓದಿದ ಶಾರದಾ ನಂದರು ಅನಂಗ ಮಹಾರಾಜರೊಡನೆ, "ಅನಂಗ, ಈ ಇಬ್ಬರು ಹುಡುಗರು ಬ್ರಹ್ಮಚರ್ಯ ದೀಕ್ಷೆಯನ್ನು ಪಡೆದುಕೊಳ್ಳುತ್ತಾರೆ. ನಾನು ಈ ಹುಡುಗರನ್ನು ಕಳುಹಿಸಿದೆನೆಂದು ರಾಜಾ ಮಹಾರಾಜರಿಗೆ ಹೇಳು" ಎಂದರು. ನಂತರ ನಾವು ಅನಂಗ ಮಹಾರಾಜರೊಡನೆ ಬೇಲೂರು ಮಠಕ್ಕೆ ಬಂದೆವು.

ತಮ್ಮ ಕಾಗದವನ್ನು ಓದಿದ ನಂತರ ಮಹಾಪುರುಷ ಮಹಾ ರಾಜರು, ರಾಜಾ ಮಹಾರಾಜರ ಕಾಗದವನ್ನು ಕೈಯಲ್ಲಿ ಹಿಡಿದು ಕೊಂಡು, "ಬಾ, ನಿನ್ನನ್ನು ಮಹಾರಾಜರಲ್ಲಿಗೆ ಕರೆದುಕೊಂಡು ಹೋಗುತ್ತೇನೆ" ಎಂದರು. ಮಹಾಪುರುಷ್ ಮಹಾರಾಜರು ಸ್ವಾಮಿ ಬ್ರಹ್ಮಾನಂದರೆಡೆಗೆ ಬಂದು, "ಮಹಾರಾಜ್, ಅಸ್ವಾಮಿನ ಇಂದ್ರದಯಾಳ್ ಬಾಬು ಅವರು ಠಾಕೂರರು ಮತ್ತು ಸ್ವಾಮೀಜಿ ಯವರ ಬಗ್ಗೆ ಅನೇಕ ಗೀತೆಗಳನ್ನು ರಚಿಸಿದ್ದಾರೆ. ಈ ಹುಡುಗ ಅವುಗಳನ್ನು ಹಾಡುತ್ತಾನೆ. ನೀವು ಅದನ್ನು ಕೇಳಬೇಕು" ಎಂದರು. ಮಹಾರಾಜರು, "ಆಗಲಿ, ನಾನು ಕೇಳುತ್ತೇನೆ" ಎಂದರು. ಆಗ ಮಹಾಪುರುಷ ಮಹಾರಾಜರು "ಹಾಗಾದರೆ ಯಾವಾಗ ಕೇಳು ತ್ತೀರಿ?" ಎಂದರು. ಅದಕ್ಕೆ ರಾಜಾ ಮಹಾರಾಜರು, "ನಾಳೆ ಸಂಜೆ ಠಾಕೂರರ ಆರತಿಯ ನಂತರ" ಎಂದರು. ತಕ್ಷಣ ಮಹಾಪುರುಷ ಮಹಾರಾಜರು "ಕೇಳಿಸಿಕೊಂಡೆಯಾ? ನಾಳೆ ರಾತ್ರಿ, ಆರತಿಯ ನಂತರ" ಎಂದು ನನಗೆ ಹೇಳಿದರು. ನನ್ನ ಹೃದಯ ಹೊಡೆದುಕೊಳ್ಳ ಲಾರಂಭಿಸಿತು. ಠಾಕೂರರ ಸ್ವಂತ ಆತ್ಮೀಯ ಶಿಷ್ಯರೆದುರು ನಾನು ಹೇಗೆ ಹಾಡಲಿ?

ಮರುದಿನ ಸ್ವಾಮಿ ವಿವೇಕಾನಂದರ ಹುಟ್ಟುಹಬ್ಬದ ಕಾರ್ಯ ಕ್ರಮವಾಗಿದ್ದರಿಂದ ಅವರ ಬಗ್ಗೆ ನಾನು ಭಕ್ತಿಗೀತೆಗಳನ್ನು ಹಾಡಬೇಕೆಂದು ತೀರ್ಮಾನವಾಗಿತ್ತು. ಸಮಾರಂಭದ ದಿನ ಬೆಳಗ್ಗೆ ನಾನು ಮಾಮೂಲಿನಂತೆ ಮಹಾಪುರುಷ ಮಹಾರಾಜರಿಗೆ

ಪ್ರಣಾಮ ಮಾಡಿದೆ. ಠಾಕೂರರ ಸಂಜೆಯ ಆರತಿಯ ನಂತರ ಮಹಡಿಯ ಮೆಟ್ಟಿಲು ಹತ್ತಿ ವಿವೇಕಾನಂದರ ಕೊಠಡಿಯ ಮೂಲಕ ಗಂಗೆಯ ಎದುರಿಗಿದ್ದ ಉದ್ದನೆಯ ವರಾಂಡಾಕ್ಕೆ ಹೋದೆ. ಅಲ್ಲಿ ಎಲ್ಲ ಸಾಧುಗಳೂ, ಪೂಜ್ಯ ರಾಜಾ ಮಹಾರಾಜರ ಮತ್ತು ಕಾಳಿ ಮಹಾರಾಜರ (ಸ್ವಾಮಿ ಅಭೇದಾನಂದ) ಮುಂದೆ ಕುಳಿತಿದ್ದರು. ಅವರಿಬ್ಬರೂ ಕುರ್ಚಿಯ ಮೇಲೆ ಕುಳಿತಿದ್ದರು. ಮಹಾಪುರುಷ ಮಹಾರಾಜರು ಮತ್ತು ಉಳಿದ ಸಾಧುಗಳು ನೆಲದ ಮೇಲೆ ಕುಳಿತಿದ್ದರು. ಒಂದು ಬಗೆಯ ಪ್ರಶಾಂತ ಮತ್ತು ಗಂಭೀರ ವಾತಾವರಣ ಅಲ್ಲಿ ಮೂಡಿತ್ತು. ಆ ದೈವಿಕ ವಾತಾವರಣದಲ್ಲಿ ಸಾಧುಗಳು ಜಪಧ್ಯಾನಗಳಲ್ಲಿ ಮಗ್ನರಾಗಿದ್ದರು. ಮಹಾಪುರುಷ ಮಹಾರಾಜರು ಗಂಗೆಯ ಕಡೆಗಿದ್ದ ಕಂಬಿಯ ಹತ್ತಿರ ಕುಳಿತಿದ್ದರು. ನಾನು ನಿಧಾನವಾಗಿ ಅವರಿಗೆ ರಾಜಾ ಮಹಾರಾಜರು ಈ ದಿನ ಸಂಜೆ ಕೆಲವು ಹಾಡುಗಳನ್ನು ಕೇಳುವುದಾಗಿ ಹೇಳಿದ್ದರು ಎಂದು ಜ್ಞಾಪಿಸಿದೆ.

ಆಗ ಮಹಾಪುರುಷ ಮಹಾರಾಜರು, ಸ್ವಾಮಿ ಬ್ರಹ್ಮಾನಂದರಿಗೆ, **"**ಮಹಾರಾಜ್, ಇಂದು ಸಂಜೆ ಈ ಹುಡುಗ ಕೆಲವು ಹಾಡುಗಳನ್ನು ಹಾಡುವುದಿತ್ತು**"** ಎಂದರು. ಆಗ ಮಹಾರಾಜರು, **"**ಆಗಲಿ, ಅವನು ಹಾರ್ಮೋನಿಯಂ ತರಲಿ**"** ಎಂದರು. ಅವರ ಅನುಮತಿ ಪಡೆದ ನಾನು ಕೆಳಗಿನ ಅತಿಥಿಗೃಹಕ್ಕೆ ಹೋಗಿ ಹಾರ್ಮೋನಿಯಂ ತಂದೆ. ಅನಂತರ ಸ್ವಾಮಿ ವಿವೇಕಾನಂದರ ಬಗ್ಗೆ, ಪೂಜ್ಯ ಪ್ರೇಮೇಶಾನಂದರು ರಚಿಸಿದ **ಏಷೋ ಭುವನ ಪಾವನ ನಾರಾಯಣ** (ಜಗತ್ತನ್ನು ಪಾವನಗೊಳಿಸುವ ಪ್ರಭುವೇ ಬಾ) ಎಂಬ ಗೀತೆಯನ್ನು ಹಾಡಿದೆ.

ಸ್ವಲ್ಪ ಸಮಯ ಹಾಡಿದ ನಂತರ ಸ್ವಾಮಿ ಬ್ರಹ್ಮಾನಂದರು, **"**ನಾರಾಯಣ, ನಾರಾಯಣ, ನಾರಾಯಣ**"** ಎಂದರು. ಹಾಡುವುದು ಮುಗಿದ ನಂತರ, ಆಶೀರ್ವಾದದ ರೂಪದಲ್ಲಿ, **"**ಈ ಗೀತೆಯನ್ನು ರಚಿಸಿದವರಿಗೆ ಎಲ್ಲಾ ಒಳ್ಳೆಯದಾಗುತ್ತದೆ ಮತ್ತು ಈ ಗೀತೆಯನ್ನು ಅಷ್ಟೇ ಚೆನ್ನಾಗಿ ಹಾಡಿದವರಿಗೂ ಅಷ್ಟೇ ಒಳ್ಳೆಯದಾಗುತ್ತದೆ**"** ಎಂದು ನುಡಿದರಂತೆ. ಅನಂತರ, **"**ನಾನು ಒಳಗೆ ಹೋಗಿ ಕುಳಿತುಕೊಳ್ಳುತ್ತೇನೆ**"** ಎಂದವರೇ ಕೋಣೆಯೊಳಗಿನ ಮಂಚದ ಮೇಲೆ ಧ್ಯಾನಕ್ಕೆ ಕುಳಿತರು. ಅನಂತರ ನಾನು, **ಕೇರೇ ಪದ್ಮಪಲಾಶ್ ಲೋಚನ** (ಕಮಲನಯನನಾದ ನೀನು ಯಾರು?) ಎಂಬ ಹಾಡನ್ನು ಹಾಡಿದೆ.

ಸ್ವಾಮಿ ಅಭೇದಾನಂದಜಿ ಮಹಾರಾಜರು ಭಾವಪರವಶರಾಗಿ, **"**ಅದ್ಭುತ, ತುಂಬಾ ಚೆನ್ನಾಗಿದೆ, ಉತ್ತಮವಾಗಿದೆ**"** ಎಂದು ಪದೇ ಪದೇ ಹೇಳಿದರು. ಆ ದೈವಿಕ ವಾತಾವರಣ ಎಲ್ಲಿ ಭಂಗವಾಗುವುದೋ ಎಂದು ಹೆದರಿದ ನಾನು ಅನಂತರ ಮಹಾರಾಜರಿಗೆ ಪ್ರಣಾಮ ಮಾಡಿ, ಹಾರ್ಮೋನಿಯಂನೊಂದಿಗೆ ಅತಿಥಿಕೋಣೆಗೆ ವಾಪಸ್ಸು ಬಂದೆ.

ಮಹಾಪುರುಷ ಮಹಾರಾಜರು ಆಗ ಗಿರೀಶ್ ಸ್ಮಾರಕ ಭವನದ ಕೆಳಮಹಡಿಯಲ್ಲಿದ್ದರು. ಪ್ರತಿದಿನ ನಾನು ಸಾಮಾನ್ಯವಾಗಿ ಆರತಿಯ ನಂತರ ಅವರಿರುವಲ್ಲಿಗೆ ಹೋಗಿ, ವಾದ್ಯಗಳೇನೂ ಇಲ್ಲದೆ, ಕೆಲವು ಭಕ್ತಿಗೀತೆಗಳನ್ನು ಹಾಡುತ್ತಿದ್ದೆ. ಆ ಸಮಯದಲ್ಲಿ ಅವರು ಠಾಕೂರರ ಬಗ್ಗೆ, ಶ್ರೀಮಾತೆಯವರ ಬಗ್ಗೆ ಮಾತನಾಡುತ್ತಿದ್ದರು ಮತ್ತು ನನಗೆ ಅನೇಕ ಬಗೆಯ ಸೂಚನೆಗಳನ್ನು ನೀಡುತ್ತಿದ್ದರು. ಒಂದು ದಿನ ಅವರು ಠಾಕೂರರ ಚಿತ್ರವನ್ನು ತೋರಿಸಿ, **"**ಠಾಕೂರರು ಈ ಯುಗದ ಅವತಾರಪುರುಷರು. ಈ ಯುಗದ ಆಧ್ಯಾತ್ಮಿಕ ಆದರ್ಶವನ್ನು ಪ್ರತಿನಿಧಿಸುವವರು ಇವರೊಬ್ಬರೇ**"** ಎಂದರು.

ಪೂಜ್ಯ ಶ್ರೀಮಾತೆಯವರಿಗೆಂದೇ ರಚಿತವಾಗಿದ್ದ ಆಗಮನಿ ಗೀತೆಯೊಂದನ್ನು (ಸ್ವಾಗತಗೀತೆ) ಮಹಾಪುರುಷ ಮಹಾರಾಜರು ಬಹಳವಾಗಿ ಇಷ್ಟಪಡುತ್ತಿದ್ದರು. ದುರ್ಗಾಪೂಜೆಗೆ ಮುಂಚೆ, ಮಹಾಪುರುಷ ಮಹಾರಾಜರ ಸಹಾಯಕರೊಬ್ಬರು, ಅವರ ಸೂಚನೆಯಂತೆ, ಆ ಗೀತೆಯನ್ನು ಬರೆದು ಕಳುಹಿಸುವಂತೆ ನನ್ನನ್ನು ಕೋರಿದರು.

ನಾನು ಮಹಾಪುರುಷ ಮಹಾರಾಜರಿಗೆ ಪ್ರಣಾಮ ಸಲ್ಲಿಸಲು ಹೋದಾಗ ಅವರು, **"**ಈ ದಿನ ಶ್ರೀಮಾತೆಯವರಿಗೆ ಹಾಡಲು ಬೇರೆ ಹಾಡುಗಳಿಲ್ಲವೇ?**"** ಎಂದು ಕೇಳಿದರು. ಅವರ ಅಪೇಕ್ಷೆಯ ಮೇರೆಗೆ, ಹಳೆಯ ಮಠಕ್ಕೆ ಹೋಗುವ ಮೆಟ್ಟಿಲಿನ ಹತ್ತಿರ ಇರುವ, ಪೂಜ್ಯ ಶ್ರೀಮಾತೆಯವರ ಪೂಜೆಗೆಂದೇ ಮೀಸಲಾದ ವಿಗ್ರಹದ ಬಳಿ ಕುಳಿತು, **ಮಾ ತ್ವಂ ಹಿ ತಾರಾ** (ಮಾತೆ, ನೀನೇ ಸಂರಕ್ಷಕಿ) ಎಂಬ ಹಾಡು ಹಾಡಿದೆ.

ಈ ಹಾಡನ್ನು ಕೇಳಿದ ಮಹಾಪುರುಷ ಮಹಾರಾಜರು ಬಹಳ ಆನಂದವನ್ನು ಅನುಭವಿಸಿ, ಅದನ್ನು ವ್ಯಕ್ತಪಡಿಸಿದರು. ಅನಂತರ ತಪನಾನಂದಜಿಯವರು ಎರಡು ಹಾಡುಗಳನ್ನು ಹಾಡಿದರು. ಕೊನೆಯದಾಗಿ ಮೃದಂಗ ವಾದನದಲ್ಲಿ ಪರಿಣತರಾದ ಭಗವಾನ್ ಸೇನ್ ಅವರು ಶ್ರೀಮಾತೆಗಾಗಿ ಮೃದಂಗವನ್ನು ನುಡಿಸಿದರು.

ಮಹಾಪುರುಷ ಮಹಾರಾಜರಿಗೆ ಮಧುರವಾದ ಕಂಠವಿತ್ತು ಮತ್ತು ಭಜನೆಗಳಲ್ಲಿ ಹೆಚ್ಚಿನ ಆಸಕ್ತಿಯಿತ್ತು. ಮುಂದೆ ಬೇಲೂರು ಮಠಕ್ಕೆ ಬಂದಾಗಲೆಲ್ಲಾ ನಾನು ಮಹಾಪುರುಷ್ ಮಹಾರಾಜರ ಅಯಾಚಿತ ಚೈತನ್ಯಪೂರಿತ ಪ್ರೀತಿ, ಆದರಪೂರ್ವಕವಾದ ಆಶೀರ್ವಾದಗಳನ್ನು ಸ್ವೀಕರಿಸುತ್ತಿದ್ದೆ. ಇವೆಲ್ಲವೂ ನನ್ನ ಹೃದಯದ ಭಂಡಾರದಲ್ಲಿ ಇಂದಿಗೂ ಎಚ್ಚರಿಕೆಯಿಂದ ಸುರಕ್ಷಿತವಾಗಿವೆ. ಈಗ, ಈ ನನ್ನ ಬದುಕಿನ ಮುಸ್ಸಂಜೆಯಲ್ಲಿ, ಪವಿತ್ರವಾದ, ಮಧುರವಾದ ಈ ನೆನಪುಗಳೇ ನನಗೆ ಅನನ್ಯ ಬೆಂಬಲವಾಗಿವೆ. ಗೆಲುವನ್ನು ನೀಡುವ ಮಹಾಪುರುಷ ಮಹಾರಾಜರ ಈ ಆಶೀರ್ವಾದಗಳೇ, ಪ್ರಚಂಡ ಜೀವನಪ್ರವಾಹವನ್ನು ದಾಟುವ ಪಯಣದಲ್ಲಿ ನನ್ನ ಏಕೈಕ ಊರುಗೋಲಾಗಿದೆ.